

ತಳಿಗಳನ್ನು ಸೃಷ್ಟಿಸುವ ಕಲೆ ಸಿದ್ಧಿಸಿತ್ತು. ಹೈಬಿಸ್ಕಸ್ ಸೊಸೈಟಿಯಲ್ಲಿ ಭಾರತದ ಪ್ರತಿನಿಧಿಯೂ ಆದರು ಪುಷ್ಪಾ.

'ಹೈಬ್ರಿಡೈಜೇಷನ್ ಬಗ್ಗೆ ತಿಳಿಯುತ್ತಿದ್ದಂತೆ ದಾಸವಾಳಗಳಲ್ಲಿ ನಮನಮೂನೆಯ ಬಣ್ಣಗಳನ್ನು ಸೃಷ್ಟಿಸುವ ಮನಸ್ಸಾಯಿತು. ಬೇರೆ ಬೇರೆ ಕಡೆಗಳಿಂದ ಬೀಜಗಳನ್ನು ತರಿಸಿಕೊಂಡೆ. ಬೀಜಗಳಿಂದ ಗಿಡ ಬೆಳೆಸಿ ಅದನ್ನು ಉಪಯೋಗಿಸಿ ಕ್ರಾಸ್ ಪಾಲಿನೇಟ್ ಮಾಡಿ ಹೊಸ ಗಿಡಗಳನ್ನು ಬೆಳೆಸಲು ಆರಂಭಿಸಿದೆ. ಹೈಬ್ರಿಡ್ ದಾಸವಾಳದಲ್ಲಿ ಸಹಜವಾಗಿ ಬೀಜ ಆಗುವುದಿಲ್ಲ. ಒಂದು ಹೂವಿನ ಪರಾಗವನ್ನು ಇನ್ನೊಂದು ಹೂವಿನ ಸ್ಟಿಗ್ಮ ಪ್ಯಾಡ್‌ಗೆ ಹಚ್ಚುವ ಮೂಲಕ ಹೊಸ ತಳಿಗೆ ಜೀವ ಕೊಡಬೇಕು' ಎಂದು ವಿವರಿಸುತ್ತಾರೆ ಅವರು.

ಇಂಥದ್ದೊಂದು ಪ್ರಯೋಗಕ್ಕೆ ಒಡ್ಡಿಕೊಂಡ ಕೆಲವೇ ದಿನಗಳಲ್ಲಿ ತಲಘಟ್ಟಪುರದಲ್ಲಿನ ಅವರ ಮನೆಯ ಅಂಗಳ, ತಾರಸಿ, ಬಾಲ್ಕನಿ ತುಂಬೆಲ್ಲಾ ಬಣ್ಣ ಬಣ್ಣದ ದಾಸವಾಳಗಳು ನಗುನಗುತ್ತಾ ನಿಂತವು. ತಮ್ಮಿಷ್ಟದ ಬಣ್ಣಗಳನ್ನು ಮೈದುಂಬಿಕೊಂಡು ಅರಳುವ ದಾಸವಾಳಗಳ ಚೆಲುವನ್ನು ಕಂಡು ಅವರ ಮುಖವೂ ಅರಳುತ್ತಿತ್ತು. ಈ ಸಂತಸಕ್ಕೆ ಗೆಳತಿ ಶ್ಯಾಮಲಾ ಮಾದಪ್ಪ ಕೂಡ ಜೊತೆಯಾದರು. ಸಮಾನ ಅಭಿರುಚಿಯ ಈ ಗೆಳತಿಯರು ಸೇರಿ ಹಲವು ಹೈಬ್ರಿಡ್ ತಳಿಗಳ ದಾಸವಾಳಗಳನ್ನು ಸೃಷ್ಟಿಸಿದರು.

2010ರಲ್ಲಿ ಫ್ಲಾರಿಡಾದಲ್ಲಿ ನಡೆದ ದಾಸವಾಳ ಪ್ರದರ್ಶನದಲ್ಲಿ ಪುಷ್ಪಾ ಅವರು ಬೆಳೆಸಿದ ತಳಿ



ಅಮೆರಿಕನ್ ಹೈಬಿಸ್ಕಸ್ ಸೊಸೈಟಿ 'ಸೀಡ್ಲಿಂಗ್ ಆಫ್ ದಿ ಇಯರ್' ಮಾನ್ಯತೆ ಪಡೆದ 'ಸೇಕ್ರೆಡ್ ಫೈರ್' ದಾಸವಾಳ ತಳಿ

'ಬೆಸ್ಟ್ ಆಫ್ ಶೋ' ಎಂದು ಆಯ್ಕೆಯಾಗಿದ್ದು ಖುಷಿಯನ್ನು ಹೆಚ್ಚಿಸಿತ್ತು. ಆನಂತರ ರಾಷ್ಟ್ರೀಯ, ಅಂತರರಾಷ್ಟ್ರೀಯ ಹೈಬಿಸ್ಕಸ್ ಸೊಸೈಟಿಗಳು ನಡೆಸುವ ಸ್ಪರ್ಧೆಗಳಲ್ಲಿ ಮಾನ್ಯತೆ ದೊರಕಿತು.

ದಾಸವಾಳಗಳನ್ನು ಸೃಷ್ಟಿಸುವುದು ಮಾತ್ರವಲ್ಲ, ಅವಕ್ಕೆ ಪ್ರೀತಿ, ಅಕ್ಕರೆಯಿಂದ ಸುಂದರವಾದ ಹೆಸರುಗಳನ್ನೂ ಇಡುತ್ತಾರೆ. ಸೋಲ್ ಮೇಟ್, ಬ್ಲ್ಯಾಕ್ ಡ್ರಾಗನ್, ಲವ್ ಸ್ಟೋರಿ, ಸಾಂಗ್ ಆಫ್ ಫಿಂಚ್, ವೆಲ್ವೆಟ್ ಕ್ವೀನ್, ಹೈ ವೋಲ್ಟೇಜ್, ಗುಲ್ಮೊಹರ್, ಶಿವಾ, ಆಮ್ರಪಾಲಿ... ಮನೆಯಂಗಳದಲ್ಲಿ ನಲಿದಾಡುತ್ತಾ ನಿಂತ ಇಂಥ ನೂರಾರು ದಾಸವಾಳಗಳನ್ನು ಹೆಸರಿಡಿದು ಕರೆದು ಮುದ್ದಾಡುತ್ತಾರೆ ಪುಷ್ಪಾ.

'ಹೈಬ್ರಿಡೈಜೇಷನ್ ಅನುಭವದಿಂದ ಸಿದ್ಧಿಸುವ ಕಲೆ' ಎನ್ನುವುದು ಅವರ ಮಾತು. 'ಹೈಬ್ರಿಡ್ ಮಾಡುವ ಮೊದಲು ಮನಸ್ಸಿನಲ್ಲಿ ಸಿದ್ಧತೆ ಇರಬೇಕು. ಎರಡನ್ನು ಸೇರಿಸಿದರೆ ಈ ರೀತಿ ಬಣ್ಣದ, ಇಂಥ ಆಕಾರದ ಹೂವು ಬಿಡಬಹುದು ಎಂಬ ಅಂದಾಜು ಇರಬೇಕು. ಹೂಗಳ ಹೈಬ್ರಿಡೈಜೇಷನ್‌ಗೆ ತಕ್ಕಂತೆ ಪೇರೆಂಟ್ ಆಯ್ಕೆ ಮಾಡಬೇಕು. ಇವೆಲ್ಲವೂ ಮಾಡುತ್ತಾ ಮಾಡುತ್ತಾ ಗಳಿಸುವ ತಿಳಿವಳಿಕೆ. ಎಕ್ಸ್‌ಪರಿಮೆಂಟ್ ಹಾಗೂ ಎಕ್ಸ್‌ಪೀರಿಯನ್ಸ್ ಮಾತ್ರ ಹೊಸತನ್ನು ಸೃಷ್ಟಿಸಬಲ್ಲದು' ಎನ್ನುವ ಪುಷ್ಪಾ ಅವರಿಗೆ ತಮ್ಮ ಮನದ ಬಣ್ಣಗಳಿಗೆ ದಾಸವಾಳವೇ ಕ್ಯಾನ್ವಾಸ್ ಆಗಿದೆ.

ಹೈಬ್ರಿಡೈಜೇಷನ್ ಮಾಡುವುದೆಲ್ಲವೂ ಯಶಸ್ವಿಯಾಗುವುದಿಲ್ಲ. ಸಾಕಷ್ಟು ಗಿಡಗಳು ಅಂದುಕೊಂಡಂತೆ ಬೆಳೆಯುವುದಿಲ್ಲ. ಅವುಗಳ ಬಣ್ಣ, ಬೆಳವಣಿಗೆ, ರೋಗತಾಳಿಕೆಯ ಗುಣ ಎಲ್ಲವನ್ನೂ ಆಧರಿಸಿ ತಳಿಗಳನ್ನು ದೃಢೀಕರಣ ಮಾಡಲಾಗುತ್ತದೆ. ಸಾವಿರಾರು ಹೈಬ್ರಿಡ್ ಗಿಡಗಳಲ್ಲಿ ಉಳಿಯುವುದು ಬೆರಳೆಣಿಕೆಯಷ್ಟು. ಈ ಕಾರಣಗಳಿಂದ ದಾಸವಾಳದ ಹೈಬ್ರಿಡೈಜರ್‌ಗಳು ಕೂಡ ತುಂಬಾ ಕಡಿಮೆ.

'ದಾಸವಾಳದ ಹೈಬ್ರಿಡೈಜೇಷನ್ ಸುಲಭವಲ್ಲ. ಇದಕ್ಕೆ ಆಸಕ್ತಿ, ತಾಳ್ಮೆ ಬೇಕು. ತುಂಬಾ ಮುಖ್ಯವಾಗಿ, ಪ್ರೀತಿಯಿರಬೇಕು. ಕೆಲವೊಮ್ಮೆ ಹೂ ಬಿಡಲು ಒಂದು ವರ್ಷ ಆಗುತ್ತದೆ. ಅಲ್ಲಿಯವರೆಗೂ ಕಾಯುವ ತಾಳ್ಮೆ ಇರಬೇಕು. ಕೆಲವರು ಹುಮ್ಮಸ್ಸಿನಿಂದ ಹೈಬ್ರಿಡೈಜೇಷನ್ ಆರಂಭಿಸುತ್ತಾರೆ. ಆದರೆ ಗಂಭೀರವಾಗಿ ಪರಿಗಣಿಸಿ ಮುಂದುವರೆಸುವವರು ತುಂಬಾ ಕಡಿಮೆ' ಎಂದು ಹೇಳುತ್ತಾರೆ.

ಪುಷ್ಪಾ ಸುರೇಶ್ ಅವರು ಇದುವರೆಗೂ ಸುಮಾರು ಎಂಟು ಸಾವಿರ ದಾಸವಾಳ ತಳಿಗಳನ್ನು ಸೃಷ್ಟಿಸಿದ್ದಾರೆ. ಅದರಲ್ಲಿ ಅಂದಾಜು 600 ತಳಿಗಳನ್ನು ನೋಂದಣಿ ಮಾಡಿದ್ದಾರೆ.

ಈಚೆಗೆ ಪುಷ್ಪಾ ಅವರು ಸೃಷ್ಟಿಸಿದ 'ಸೇಕ್ರೆಡ್ ಫೈರ್' ಎಂಬ ದಾಸವಾಳ ಹೂವಿನ ತಳಿಗೆ ಅಮೆರಿಕನ್ ಹೈಬಿಸ್ಕಸ್ ಸೊಸೈಟಿ 'ಸೀಡ್ಲಿಂಗ್ ಆಫ್ ದಿ ಇಯರ್' ಎಂದು ಮೊದಲ ಸ್ಥಾನದ ಮಾನ್ಯತೆ ನೀಡಿದೆ. ಈ ಮೂಲಕ ಪುಷ್ಪಾ ಅವರ ಬಹು ವರ್ಷಗಳ ಕನಸು ಸಾಕಾರಗೊಂಡಿದೆ. ಭಾರತೀಯ ದಾಸವಾಳದ ತಳಿ ದೇಶ ವಿದೇಶಗಳಲ್ಲಿ ಮನ್ನಣೆ ಪಡೆದಿರುವುದು ಅವರ ಖುಷಿಯನ್ನು ದುಪ್ಪಟ್ಟು ಮಾಡಿದೆ. ಇನ್ನಷ್ಟು ಬಣ್ಣ ಬಣ್ಣದ ದಾಸವಾಳಗಳನ್ನು ಸೃಷ್ಟಿಸುವ ಹುಮ್ಮಸ್ಸು ತುಂಬಿದೆ.

ಪ್ರತಿಕ್ರಿಯಿಸಿ: feedback@sudha.co.in

